### ಚೆನ್ನಾಗಿ ಮೂಡಿಬಂದಿದೆ

'ವಿಶ್ವಕಪ್ ಹಾಕಿ ಭಾರತ ಹಚ್ಚೀತೆ ಪಟಾಕಿ?', ವಿಶಾಖ ಎನ್. ಅವರ ಮುಖಪುಟ ಲೇಖನ (ಸುಧಾ ನವೆಂಬರ್ 22) ಚೆನ್ನಾಗಿ ಮೂಡಿಬಂದಿದೆ. ಲೇಖಕರು ತಿಳಿಸಿರುವಂತೆ ಹಾಕಿ ಆಟದಲ್ಲಿ ಭಾರತವು ಏಳುಗಳಿಗಿಂತ ಹೆಚ್ಚಾಗಿ ಬೀಳುಗಳನ್ನೇ ಕಂಡಿದೆ. ಕಾರಣಗಳು ಏನೇ ಇರಲಿ, ಭಾರತ ಈ ಬಾರಿ ಹಾಕಿಯಲ್ಲಿ ವಿಶ್ವಕಪ್ ಪಡೆದು, ಹಾಕಿ ಪ್ರಿಯರು ಹಾಗೂ ಆಸಕ್ತರೆಲ್ಲರೂ ಪಟಾಕಿ ಹಚ್ಚಿ ಸಂಭ್ರಮಿಸುವಂತಾಗಲಿ ಎಂದು ಆಶಿಸೋಣ.

—ಸು. ವಿಜಯಲಕ್ಷ್ಮಿ, ಶಿವಮೊಗ್ಗ

### ಪುಷ್ಕರ ಮೇಳ

'ಭಕ್ತಿಯ ಪಸೆ; ಒಂಟೆ ಪರಿಷೆ' (ಸುಬ್ಬರಾವ್ ಎನ್.ಕೆ.) ಲೇಖನ ಓದುಗರನ್ನು ಈ ಐತಿಹಾಸಿಕ ನಗರಿಗೆ ಕೊಂಡೊಯ್ದಿತು.

ಹಳೆಯ ಮೇಳಗಳಲ್ಲಿ ಒಂದಾದ ರಾಜಸ್ತಾನದ ಪುಷ್ಕರ ಮೇಳ, ಅಲ್ಲಿನ ಪುಷ್ಕರ ಪಟ್ಟಣ, ಪ್ರತಿ ವರ್ಷ ಕಾರ್ತೀಕ ಪೂರ್ಣಿಮೆಯ ದಿನ ಲಕ್ಷಾಂತರ ಭಕ್ತರು ಮಿಂದು ಪುನೀತರಾಗುವ ಪುಷ್ಕರ ಸರೋವರ, ಬ್ರಹ್ಮ ದೇವಸ್ಥಾನ, ವಿಶ್ವಪ್ರಸಿದ್ಧ ಒಂಟೆಗಳ ಜಾತ್ರೆ ಮುಂತಾದವುಗಳನ್ನು ಪರಿಚಯಿಸಿದ ಲೇಖನ ಸಮಗ್ರವಾಗಿದೆ.

—ಪಿ.ಜಯವಂತ ಪೈ ಕುಂದಾಪುರ

### ಅರ್ಥಪೂರ್ಣ ಬರಹ

'ನಿಮ್ಮೊಡನೆಯಲ್ಲಿ 'ನಿಂತೀತೆ ಅಮಾನವೀಯ ಹುಲಿ ಹತ್ಯೆ?' ('ಸುಧಾ ಹೆಗಡೆ) ಬರಹ ಅರ್ಥಪೂರ್ಣವಾಗಿದೆ.

—ರಾಜೀವ್ ಎನ್.ಮಾಗಲ್, ಸಕಲೇಶಪುರ




### ಶಾಲ್ಮಲೆಯ ಉಗಮಸ್ಥಾನ

ಪ್ರಕೃತಿ ಅಂಕಣದಲ್ಲಿ 'ಶಾಲ್ಮಲೆ ಹರಸಿದ ದೇವರ ಹೊಳೆ' (ಅರ್ಚನಾ ಬೊಮ್ನಳ್ಳಿ) ಆಕರ್ಷಕವಾದ ಚಿತ್ರಗಳೊಂದಿಗೆ ಉತ್ತರ ಕನ್ನಡ ಜಿಲ್ಲೆಯ ಪ್ರಕೃತಿ ಸೌಂದರ್ಯವನ್ನು ಬಣ್ಣಿಸಲಾಗಿದೆ. ಶಿರಸಿ ಬಳಿಯ 'ಸಹಸ್ರಲಿಂಗ' ಹಾಗೂ 'ದೇವರ ಹೊಳೆ'ಗೆ ಮಕ್ಕಳೊಂದಿಗೆ ಹೋಗಿ ಹಿರಿಯರೂ ಮಕ್ಕಳಾಗಿ ನೀರಾಟ ಆಡಿ ಬರಬೇಕು ಎಂದೆನಿಸುತ್ತದೆ. ಲೇಖಕರು ಮುಖ್ಯವಾಗಿ ಶಾಲ್ಮಲೆಯ ಉಗಮಸ್ಥಾನ ಧಾರವಾಡ ಸೋಮೇಶ್ವರ ದೇವಸ್ಥಾನ ಸಮೀಪ ಎಂದು ಹೇಳುವುದನ್ನು ಮರೆತಿದ್ದಾರೆ.

—ರಾಜಶೇಖರ ಹಾದಿಮನಿ, ಧಾರವಾಡ

### ವಿನೂತನ ಅನುಭವ

ಪ್ರವಾಸ ಅಂಕಣದಲ್ಲಿ ಕಾಲು ನಡಿಗೆ, ಕಾಲುವೆ ಕ್ಯಾನ್ವಾಸ್‌ನ 'ಆಮ್‌ಸ್ಟರ್ ಡ್ಯಾಂ' (ಡಾ. ಕೆ.ಎಸ್. ಪವಿತ್ರ) ಲೇಖನ ವಿನೂತನ ಅನುಭವ ನೀಡಿತು. ಸಾಂಪ್ರದಾಯಿಕತೆ ಹಾಗೂ ಆಧುನಿಕತೆಯ ಮೆರುಗು ಎರಡೂ ಮೇಳೈಸಿದ ನಗರದ ಇಡೀ ಊರು ಒಂದು ಅಪೂರ್ವ ಮ್ಯೂಸಿಯಂನಂತೆ ಆಕರ್ಷಿಸಿತು. ಅಲ್ಲಿಗೆ ಒಮ್ಮೆ ಪ್ರವಾಸ ಹೋಗಿ ಬರುವ ಮನಸ್ಸಾಯಿತು.

—ವಿ. ಹೇಮಂತಕುಮಾರ ಬೆಂಗಳೂರು,
ಕೋಟೇಶ್ವರ ಸೂರ್ಯನಾರಾಯಣರಾವ್
ಬೆಂಗಳೂರು

### ಮಹಿಳೆಯರಿಗೆ ಅಗತ್ಯ

ಸೌಂದರ್ಯ ಅಂಕಣದಲ್ಲಿ 'ಸೌತೆಕಾಯಿ ಫೇಷಿಯಲ್' (ಶಾರದಾ ಪಿ.ಬಿ) ಲೇಖನ ಉಪಯುಕ್ತ ಮಾಹಿತಿ ನೀಡಿದೆ. ಮುಖ ಹಾಗೂ ಕೈಕಾಲುಗಳ ತ್ವಚೆಯ ನಯ ಹಾಗೂ ಅಂದಕ್ಕೆ ಸೌತೆಕಾಯಿ ಬಹಳ ಪ್ರಯೋಜನಕಾರಿಯಾಗಿದೆ. ಫೇಷಯಲ್ ಬಗೆಗಿನ ಮಾಹಿತಿ ಮಹಿಳೆಯರಿಗೆ ಅತ್ಯವಶ್ಯಕ ಎನಿಸಿತು.

—ಪ್ರಾರ್ಥನಾ ಹೇಮಂತಕುಮಾರ, ಬೆಂಗಳೂರು

---

### ಕನ್ನಡದ ಭಗವದ್ಗೀತೆ

'ಕನ್ನಡದ ಭಗವದ್ಗೀತೆಗೆ 75 ವರ್ಷ'(ಎಸ್. ಸೂರ್ಯಪ್ರಕಾಶ್ ಪಂಡಿತ್) ಲೇಖನ ಅತ್ಯಂತ ಸಮಯೋಚಿತ. ಈ ಸಂದರ್ಭದಲ್ಲಿ ಡಿ.ವಿ. ಗುಂಡಪ್ಪ ಅವರಿಗೆ ಸಲ್ಲಿಸಿದ ನಮನ ಮೆಚ್ಚುಗೆಯಾಯಿತು.

—ಸುಂದರ್ ಬೆಂಗಳೂರು, ನರೇಂದ್ರ ಸಿರಕಜೆ
ಮೈಸೂರು, ಮನೋಹರ
ಚಳ್ಳಕೆರೆ, ಎಚ್.ಆನಂದಕುಮಾರ್
ಚಿತ್ರದುರ್ಗ, ಎಸ್. ಚನ್ನಪ್ಪ
ಮೈಸೂರು,ಮಧುರ ಸುಬ್ರಹ್ಮಣ್ಯ,
ಬೆಂಗಳೂರು



### ಹೆಮ್ಮೆಯ 'ಕಗ್ಗ'

ಲೇಖನ ಅರ್ಥಪೂರ್ಣ. ನಮ್ಮ ಕನ್ನಡದ ಗುರುಗಳನೇಕರು 'ಈ ಪುಸ್ತಕ ಓದೋ' ಎಂದು ಆದೇಶಿಸಿ ಅದರ ಕೆಲವು ಪದ್ಯಗಳನ್ನು ಹೇಳಿ, ವಿವರಣೆ ನೀಡುತ್ತಿದ್ದರು. ಮುಖ್ಯವಾಗಿ 'ಬದುಕು ಜಟಕಾ ಬಂಡಿ' ಎಂಬ ಕವನವನ್ನು ನಾನೂ ನನ್ನ ಸ್ನೇಹಿತರ ಆರು ದಶಕಗಳ ಹಿಂದಿನ ಮೈಸೂರು ಜಟಕಾ ಪ್ರಯಾಣದಲ್ಲಿ ನೆನಪಿಸಿಕೊಳ್ಳುತ್ತಿದ್ದೆವು. ಇಂದಿಗೂ ನನ್ನಲ್ಲಿ ಅದರ ಒಂದು ಪ್ರತಿ ಇದ್ದು, ಆಗಾಗ ಓದಿ ಅರ್ಥ ಮಾಡಿಕೊಳ್ಳಲು ಯತ್ನಿಸುತ್ತೇನೆ. ಅದಕ್ಕೆ ಜ್ಞಾನಪೀಠ ಪ್ರಶಸ್ತಿ ಬರದಿದ್ದುದು ಮಾತ್ರ ನೋವಿನ ವಿಷಯ.

—ಡಾ. ಕೆ.ಕೆ. ಜಯಚಂದ್ರ ಗುಪ್ತ, ಹಾಸನ

### ಅಮರ ಚೇತನ!

ಡಿ.ವಿ.ಜಿ. ಅವರ ಕಗ್ಗದ ಎಲ್ಲ 945 ಚೌಪದಿಗಳೂ ಸಾರ್ವಕಾಲಿಕ.

'ಇರುವ ಭಾಗ್ಯವ ನೆನೆದು;
ಬಾರೆನೆಂಬುದನು ಬಿಡು
ಹರುಷಕಿದೆ ದಾರಿ; ಮಂಕುತಿಮ್ಮ'

ಎಂಬ ಅವರ ಕಗ್ಗವಂತೂ ಎಲ್ಲರ ಬಾಯಲ್ಲಿ ನಲಿದಾಡುತ್ತಿರುತ್ತದೆ.

—ನಾರಾಯಣ ಯಾಜಿ, ಶಿರಾಲಿ

### ವಿವಿಯಲ್ಲಿ ಪಠ್ಯ

ದಿ. ಡಾ. ಸರೋಜಿನಿ ಮಹಿಷಿಯವರು 'ಮಂಕುತಿಮ್ಮನ ಕಗ್ಗ' ವನ್ನು 60ನೇ ದಶಕದಲ್ಲಿ ಹಿಂದಿಗೆ ಅನುವಾದಿಸಿದರು. ಡಿ.ವಿ.ಜಿ. ಯವರ ಅನುಮತಿ ಪಡೆದು ಅನುವಾದದ ನಂತರ ಅವರಿಗೆ ಓದಿ ತೋರಿಸಿ ಪ್ರಕಟಿಸಿದರು. ಈ ಅನುವಾದಿತ ಕೃತಿಯ 'ಮೂಢ ತಿಮ್ಮ ದರ್ಶನ' ಎಂಬ ಹೆಸರಿನಿಂದ ಹಿಂದೀ ಭಾಷಿಕ ಪ್ರದೇಶದಲ್ಲಿ ಜನಪ್ರಿಯವಾಗಿದೆ. ಮೇಲಿಂದ ಮೇಲೆ ಪುನರ್ ಮುದ್ರಣವನ್ನು ಕಾಣುತ್ತಿದೆ. ಆ ಭಾಗದ ಅನೇಕ ವಿಶ್ವ ವಿದ್ಯಾಲಯಗಳು ಈ ಕೃತಿಯನ್ನು ಪಠ್ಯವಾಗಿ ಅಂಗೀಕರಿಸಿವೆ.

– ಪ್ರಲ್ಹಾದ ಬಿ. ಮಹಿಷಿ, ಬೆಂಗಳೂರು

### ಅಕ್ಷರಶಃ ಸತ್ಯ

ಲೇಖನದ ಕೊನೆಯ ಸಾಲುಗಳಲ್ಲಿ ಡಿವಿಜಿ ಅವರ ಕಗ್ಗದ ಕುರಿತು ಅದು ಇಂದಿನ ನಮ್ಮ ಮತಿಯ ಮಿತಿಯನ್ನೂ, ಗತಿಯ ಸ್ಥಿತಿಯನ್ನೂ ಕನ್ನಡಿಯಂತೆ ಕಾಣಿಸಬಲ್ಲ ಕೃತಿ ಎಂಬುದು ಅಕ್ಷರಶಃ ಸತ್ಯ.

—ಅರವಿಂದ ಜಿ. ಜೋಷಿ, ಮೈಸೂರು

### ಹೋಲಿಕೆ ಸಮಂಜಸವಲ್ಲ

ಡಾ.ರಾಜ್ ಕುಮಾರ್ ಅವರು ಸೊಗಸಾಗಿ ಹಾಡಿರುವ ಈ ಕಾವ್ಯದ ಧ್ವನಿಸುರುಳಿಯ ಬಗ್ಗೆ ಈಗಲೂ ಅನೇಕರಿಗೆ ತಿಳಿದಿಲ್ಲ. ಸೂರ್ಯಪ್ರಕಾಶ್ ಅವರ ಲೇಖನದಲ್ಲೂ ಇದನ್ನು ಸೂಚಿಸಿಲ್ಲ. 'ಭಗವದ್ಗೀತೆ ತನ್ನಲ್ಲಿರುವ ತತ್ವವೇ ಅಂತಿಮ ಸತ್ಯ ಎಂದು (ಅನೇಕ ಧರ್ಮಗಳ ಗ್ರಂಥಗಳ ಹಾಗೆ) ಸಾರಿಕೊಳ್ಳುತ್ತದೆ. 'ಕಗ್ಗ' ಹಾಗೆ ಎಲ್ಲೂ ಹೇಳಿಕೊಂಡಿಲ್ಲ. ಆದ್ದರಿಂದ 'ಕಗ್ಗ' ವನ್ನು 'ಭಗವದ್ಗೀತೆ'ಗೆ ಹೋಲಿಸುವುದು ಸಮಂಜಸವೆನಿಸದು.

—ಎ. ಜಾನಕಿರಾಮ್ ಬೆಂಗಳೂರು